ಎದುರಿಗಿದ್ದವರ ಕಣ್ಣಿಗೆ ಕಣ್ಣು ಕೊಟ್ಟು ಸುಳ್ಳು ಹೇಳಲು ನನಗೆ ಬರುವುದಿಲ್ಲ. ಅದಕ್ಕೇ ಮಾತನಾಡುವಾಗ ಬಾಸಿಯ ಮುಖ ನೋಡಿದೆ. ಅವನಿಗೂ ಮಿಸೆಸ್ ಆಂಡರ್ಸನ್‌ರಿಗೂ ಒಟ್ಟಿಗೇ ನನ್ನ ಗುಟ್ಟು ಗೊತ್ತಾಯಿತೇನೋ ಎಂದು ಕಳವಳವಾಯಿತು.

"ಸ್ವಲ್ಪ ಲಕ್ಷ್ಯವಿರಲಿ ನಿಮಗೆ. ಟೀನೇಜ್ ಮಕ್ಕಳು ಹೀಗೇ. ಅವರಿಗೆ ಮಧ್ಯರಾತ್ರಿಯೇ ಹೋಮ್‌ವರ್ಕ್ ಇರುತ್ತದೆ. ನಾನೂ ಎರಡು ಮಕ್ಕಳನ್ನು ಬೆಳೆಸಿದ್ದೇನಲ್ಲ. ಪೇರೆಂಟ್ಸ್ ಮನೆಯಲ್ಲಿ ಇರುವ ತನಕ ಇದೆಲ್ಲ ನಡೆಯುವುದಿಲ್ಲ ಅಂತ ನೀವು ಸ್ಟ್ರಿಕ್ಟ್ ಆಗಿ ಹೇಳಬೇಕು. ಆಮೇಲೆ ಹೂಂ ಹಾಂ ಎನ್ನುವುದರೊಳಗೆ..." ಮಿಸೆಸ್ ಆಂಡರ್ಸನ್ ವಾಕ್ಯ ಮುಗಿಸುವುದರೊಳಗೆ ಅವರ ಫೋನಿಗೆ ಕರೆ ಬಂತು. ಆ ಕರೆ ಮಾಡಿದವರಿಗೆ ಮನಸ್ಸಿನಲ್ಲೇ ಒಂದು ಧನ್ಯವಾದ ಹೇಳಿ ಮೆಟ್ಟಿಲೇರತೊಡಗಿದೆ. ತನ್ನ ನಾಯಿಗಾಗಿಯೇ ಯೂಟ್ಯೂಬಿನಲ್ಲಿ ಬಗೆಬಗೆಯ ರೆಸಿಪಿಗಳನ್ನು ನೋಡಿ ತಯಾರಿಸುವಷ್ಟು ವಿರಾಮವಿರುವ ಮಿಸೆಸ್ ಆಂಡರ್ಸನ್, ಮಾತಿಗೆ ನಿಂತರೆ ಒಂದು ಗಂಟೆ ಕಡಿಮೆ ಬಿಡುವುದಿಲ್ಲ.

ಫಾಲ್ ತಿಂಗಳುಗಳ ಈ ತಂಪು ಹವೆ ನನಗೆ ಇಷ್ಟ. ಈಗಷ್ಟೇ ಬೇಸಿಗೆ ಮುಗಿದು ಇನ್ನೇನು ಚಳಿಗಾಲ ಶುರುವಾಗುವ ಅಂತರದಲ್ಲಿ ಹೀಗೆ ಬಂದು ಹಾಗೆ ಮುಗಿದು ಹೋಗುವ ಋತು ಇದು. ಒಂಚೂರೂ ಗಾಳಿ ಬೀಸದೇ ಇದ್ದಾಗಲೂ ರೆಫ್ರಿಜರೇಟರಿನಲ್ಲಿರುವ ಹಾಗೆ ತೇವ ಗಾಳಿಯೊಳಗೇ ಬೆರೆತು ಹೋಗಿರುತ್ತದೆ. ನಮ್ಮ ಮೆಟ್ಟಿಲು ಕಳೆದ ವರ್ಷಕ್ಕಿಂತ ಜೀರ್ಣವಾದುದನ್ನು ಗಮನಿಸಿ ಈ ಬಾರಿಯಾದರೂ ಅಸೋಸಿಯೇಷನ್ನಿನವರು ವಾರ್ನಿಶ್ ಹೊಡೆಸಿದರಾಗುತ್ತಿತ್ತು ಅಂದುಕೊಂಡೆ. ನಾವಿರುವ ಟೌನ್ ಹೌಸ್ ಸ್ವಂತ ಮನೆಯೇ ಆದರೂ ಹೊರಾಂಗಣದ ನಿರ್ವಹಣೆಗೆ ತಿಂಗಳಿಗೆ ನಾಲ್ಕುನೂರು ಡಾಲರು ಕೊಟ್ಟರೆ ಆಯಿತು, ಅದನ್ನು ಈ ಸಂಘದವರೇ ನೋಡಿಕೊಳ್ಳುತ್ತಾರೆ. ಅದಕ್ಕೆಲ್ಲ ಏನು ಅವರಿಗೆ ಕಾಯೋದು, ನಾವೇ ವಾರ್ನಿಶ್ ತಂದು ಹೊಡೆದುಕೊಳ್ಳಬಹುದಲ್ಲ ಅಂತ ಮಾರ್ಕೋ ಈಗಾಗಲೇ ನಾಲ್ಕು ಬಾರಿ ಹೇಳಿಯಾಗಿದೆ. ಹಾಗೆ ಮಾಡಿದರೆ ಅವರಿಗೆ ಕೊಡುವ ದುಡ್ಡು ದಂಡವಾಗುತ್ತದೆ ಅನ್ನೋದು ನನ್ನ ವಾದ. ಬರುವಷ್ಟು ದಿನ ಬರಲಿ, ವಿಂಟರ್ ಮುಗಿದು ಸ್ಪ್ರಿಂಗ್ ಶುರುವಾದಾಗಲೂ ಅವರು ಬರದಿದ್ದರೆ ಸಂಘದ ಆಫೀಸಿಗೆ ಹೋಗಿ ಒಮ್ಮೆ ದಬಾಯಿಸಿ ಬರುತ್ತೇನೆ ಅಂತ ಹೇಳಿದ್ದೆ. ಮಾರ್ಕೋ ತನ್ನ ಕಣ್ಣುಗುಡ್ಡೆಗಳನ್ನು ಹುಬ್ಬುಗಳ ತನಕ ಹಾರಿಸಿ ಅದಕ್ಕೆ ಹೊಂದುವಂತೆ ಹೆಗಲು ಹಾರಿಸಿ ಪಕ್ಕಾ ಅಮೆರಿಕನ್ ಭಾಷೆಯ ಒತ್ತಿನಲ್ಲಿ, "ವಾಟೆವರ್" ಎಂದು ಹೇಳಿ ಹೊರ ನಡೆದಿದ್ದ.

ಚಹಕ್ಕಿಡುವಾಗ ಮಾರ್ಕೋ ಇನ್ನೂ ಎದ್ದಿಲ್ಲದಿರುವುದನ್ನು ಗಮನಿಸಿದೆ. ನನಗೆ ಬೆಳಗ್ಗೆ ಎದ್ದ ತಕ್ಷಣ ಖಾಲಿ ಹೊಟ್ಟೆಯಲ್ಲಿ ಖಡಕ್ ಚಹ ಬೇಕು. ನಾನು ಹುಟ್ಟಿ ಬೆಳೆದ ಹುಬ್ಬಳ್ಳಿಯಿಂದ ಆವಾಹಿಸಿಕೊಂಡ ರೂಢಿ ಇದು. ಚಹ ಕುದ್ದು ಉಕ್ಕುವಾಗ ಕಿಚನ್ನಿನ ತುಂಬೆಲ್ಲ ಕಮ್ಮನೆ ಪರಿಮಳ ಬೀರುತ್ತದೆ. ಹಾಗೇ ಗ್ಯಾಸನ್ನು ಸಣ್ಣಗೆ ಮಾಡಿಟ್ಟು ಆ ಘಮವನ್ನು ಒಂದೆರಡು ನಿಮಿಷ ನಾನು ಆಘ್ರಾಣಿಸಬೇಕು. ಅಂದರೆ ಮಾತ್ರ ಹೊಟ್ಟೆಯ ಕಟ್ಟುಗಳೆಲ್ಲ ಸಡಿಲವಾಗಿ ನಾನು ಬಾತ್‌ರೂಮಿಗೆ ಹೋಗಬಹುದು. ನನ್ನ ಗಂಡ ಸುಹಾಸನೊಂದಿಗೆ ಅವನ ಕಾಫಿ ಪ್ರಿಯ ಸಂಬಂಧಿಕರ ಮನೆಗಳಿಗೆ ಹೋದಾಗ ಈ ವಿಷಯಕ್ಕೆ ನನಗೆ ಮುಜುಗರ ಉಂಟಾಗಿದೆ, ಇರಲಿ.

ಟಾಯ್ಲೆಟ್ಟಿಗೆ ಹೋಗಿ ಬಂದು ಟೀ ಸೋಸುತ್ತ ನಿಂತಾಗ ಮಾರ್ಕೋ ಎದ್ದು ಬಂದ. ದೋಸೆಗೆ ಕಾವಲಿಯಿಡುತ್ತ, "ಸ್ಕೂಲು ಬಸ್ಸು ಬರುವುದಕ್ಕಾಯ್ತಲ್ಲ ಮಾರ್ಕೋ" ಅಂದೆ. "ಐ ನೋ, ಮಾಮ್" ಎಂದವನು ಮುಂದಿನ ಎಂಟೇ ನಿಮಿಷಗಳಲ್ಲಿ ಸುಂಟರಗಾಳಿಯಂತೆ ಬಚ್ಚಲಿಗೆ ನಡೆದು, ಶವರ್ ಮುಗಿಸಿ, ಎರಡು ಬ್ರೆಡ್ ತುಂಡುಗಳನ್ನು ರೋಸ್ಟ್ ಮಾಡಿಕೊಂಡು ಒಂದು ಬದಿಯಲ್ಲಿ ಜಾಮ್ ಇನ್ನೊಂದು ಬದಿಯಲ್ಲಿ ಪೀನಟ್ ಬಟರ್ ಹಚ್ಚಿಕೊಂಡು ಪ್ಲಾಸ್ಟಿಕ್ಕಿನ ಝಿಪ್ಪರ್‌ನಲ್ಲಿಡುತ್ತ ಬ್ಯಾಗೇರಿಸಿಕೊಂಡು